ಕರ್ನಾಟಕ ಸರ್ಕಾರ Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

# Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರಸ್ತೆ , ರಾಯಚೂರು Hyderabad Road, Raichur

www.rims-raichur.com info@rims-raichur.com Phone/Fax : 08532 238488/89

ಸಂಖ್ಯೆ: ರಿಮ್ಸ್/ಸಿಬ್ಬಂದಿ–02/179/~~2017-18~~ 2016-17 Speed post ದಿನಾಂಕ: 02.05.2017

## ಅಧಿಕೃತ ಜ್ಞಾಪನಾ ಪತ್ರ

ವಿಷಯ : ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಇಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳನ್ನು ನೇಮಕಾತಿ ಬಗ್ಗೆ.

ಉಲ್ಲೇಖ : ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು, ಇವರ ಪತ್ರ ಸಂಖ್ಯೆ: ಇಡಿ/ಕೆ.ಇ.ಎ/ಆಡಳಿತ/45/14–15 ದಿನಾಂಕ 24.10.2016.

*****()*****

ಉಲ್ಲೇಖಿತ ಅಧಿಸೂಚುನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯ ಅನುಸಾರ HK & Non-HK ಪ್ರದೇಶಗಳಲ್ಲಿನ ಶುಶ್ರೂಷಕರ ಹುದ್ದೆಗೆ ರಾಜ್ಯ ವೇತನ ಶ್ರೇಣಿ ರೂ. 17650-450-19000-500-21000-600-24600-700-28800-800-32000 ಎರಡು ವರ್ಷಗಳ ಖಾಯಂಪೂರ್ವಾ ಸೇವಾ ಅವಧಿಯ ಮೇರೆಗೆ ತಾತ್ಕಾಲಿಕವಾಗಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆಯ್ಕೆ ಮಾಡಿಕೊಂಡಿರುವ ಈ ಸಂಸ್ಥೆಗೆ ಅಭ್ಯರ್ಥಿಗಳನ್ನು ನೇಮಕಮಾಡಿ ನಿಯುಕ್ತಿಗೊಳಿಸಲಾಗಿದೆ.

| ಕ್ರಮ ಸಂಖ್ಯೆ | ಆಯ್ಕೆ ಪಟ್ಟಿ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು ಮತ್ತು ವಿಳಾಸ | ವಿದ್ಯಾರ್ಹತೆ | ವರ್ಗ | ಆಯ್ಕೆಯಾದ ವರ್ಗ | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 157 | 09 | KIRANKUMAR R<br>S/o Rudresh KG Thumbigere Kariyappa,<br>Post: Avargere, Dist : DAVANGERE<br>Ph: 9096704278 | Diploma Nursing | 3B | 3B | |
| 158 | 12 | KAVITHA N<br>D/o Narasimha Murthy KG Temple Post Gubbi<br>Tq& DIST: TUMKURU Ph: 9611297802 | Diploma Nursing | SC | SC/W | |
| 159 | 89 | SHEETHAL BAI<br>H.No. 1294 Near kota cross itatti Tq: Lingasugur<br>Dist: RAICHUR Ph: 8867476441 | Diploma Nursing | 2A | 2A/W | |
| 160 | 117 | AMBIKA SINGH<br>H.No. 1-4-1479-16/17 Venkateshwara colony behind<br>chitanya school I.B. Road, Dist: RAICHUR<br>Ph: 7795551711 | Diploma Nursing | 2A | 2A/RL | |

Government of Karnataka

ಕರ್ನಾಟಕ ಸರ್ಕಾರ

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

# Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರಸ್ತೆ , ರಾಯಚೂರು Hyderabad Road, Raichur

Phone/Fax : 08532 238488/89

www.rims-raichur.com info@rims-raichur.com

**ಷರತ್ತು ಮತ್ತು ನಿಬಂಧನೆಗಳು:**

1. ಈ ನೇಮಕಾತಿ ಪತ್ರ ತಲುಪಿದ 15 ದಿನಗಳೊಳಗಾಗಿ ಅಭ್ಯರ್ಥಿಯು ನಿರ್ದೇಶಕರು, ರಿಮ್ಸ್, ರಾಯಚೂರು ಇವರಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ನೇಮಕಾತಿ ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977ರ 18(3)ರ ನಿಯಮದನ್ವಯ ಯಾವುದೇ ಸೂಚನೆಯಿಲ್ಲದೇ ರದ್ದು ಪಡಿಸಲಾಗುವುದು.
2. ಈ ನೇಮಕಾತಿಯು ಕರ್ನಾಟಕ ನಾಗರೀಕ ಸೇವಾ (ಪರೀಕ್ಷಣಾ) ನಿಯಮಗಳು 1977 ರನ್ವಯ ಎರಡು ವರ್ಷಗಳ ಖಾಯಂಪೂರ್ವ ಸೇವಾವಧಿಯಲ್ಲಿರುತ್ತದೆ. ಈ ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಮುಗಿಸಿದ ನಂತರ ಹುದ್ದೆಯನ್ನು ಖಾಯಂಗೊಳಿಸಲಾಗುವುದು. ಖಾಯಂಪೂರ್ವ ಸೇವಾವಧಿಯಲ್ಲಿ ಸಂಸ್ಥೆಯು ಯಾವುದಾದರೂ ತರಬೇತಿಯನ್ನು ನಿಗಧಿಪಡಿಸಿದ್ದಲ್ಲಿ ಅದನ್ನು ಪೂರ್ಣಗೊಳಿಸತಕ್ಕದ್ದು. ಖಾಯಂಪೂರ್ವ ಸೇವಾವಧಿಯನ್ನು ತೃಪ್ತಿಕರವಾಗಿ ಪೂರೈಸದಿದ್ದಲ್ಲಿ ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದಿದ್ದಲ್ಲಿ ನಿಯಮಾನುಸಾರ ಕೆಲಸದಿಂದ ಅವರನ್ನು ವಜಾ ಮಡುವ ಅಧಿಕಾರವನ್ನು ಸಕ್ಷಮ ಪ್ರಾಧಿಕಾರ ಹೊಂದಿದೆ. ಆದರೆ ಖಾಯಂ ಪೂರ್ವ ಸೇವಾವಧಿಯಲ್ಲಿ ಯಾವುದೇ ಉನ್ನತ ಶಿಕ್ಷಣಕ್ಕೆ ನಿಯೋಜನೆ ಮೇಲೆ ತೆರಳಲು ಅರ್ಹರಲ್ಲ.
3. ಅಭ್ಯರ್ಥಿಯು ಕೆಲಸಕ್ಕೆ ಹಾಜರಾಗುವ ಸಮಯದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಅಂದರೆ ಹುದ್ದೆಗೆ ನಿಗಧಿಪಡಿಸಿರುವ ಪದವಿ ಅಂಕಪಟ್ಟಿ, ಜನ್ಮ ದಿನಾಂಕವನ್ನೊಳಗೊಂಡ ಎಸ್.ಎಸ್.ಎಲ್.ಸಿ ಅಂಕಪಟ್ಟಿ ದಾಖಲೆ, ಅನುಭವ ಪ್ರಮಾಣ ಪತ್ರ, ಮೀಸಲಾತಿ ಅಥವಾ ಒಳ ಮೀಸಲಾತಿ ಆಯ್ಕೆಯಾಗಿದ್ದರೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ, ನಡತೆ ಪ್ರಮಾಣ ಪತ್ರ ಇತ್ಯಾದಿಗಳನ್ನು ನಿರ್ದೇಶಕರು ಮುಂದೆ ಹಾಜರುಪಡಿಸತಕ್ಕದ್ದು.
4. ಇತರೆ ಎಲ್ಲಾ ಸೇವಾ ಷರತ್ತುಗಳು ಈ ಸಂಸ್ಥೆಯ ಬೈಲಾಗಳಲ್ಲಿರುವ ಸೇವಾ ನಿಯಮಗಳಂತೆ ಮತ್ತು ಮುಂದೆ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ನಿಯಮಗಳಿಗೆ ಸರ್ಕಾರ / ಸಂಸ್ಥೆ ತೆಗೆದುಕೊಳ್ಳುವ ನಿಯಮಗಳಿಗೆ ಒಳಗೊಂಡಿರತಕ್ಕದ್ದು.
5. ಈ ನೇಮಕಾತಿಯು ತಾತ್ಕಾಲಿಕವಾಗಿದ್ದು. ಜಾತಿ ಪ್ರಮಾಣ ಪತ್ರ ಅಥವಾ ವಿವಾಹ ಸ್ಥಿತಿಗತಿ ಪ್ರಮಾಣ ಪತ್ರಗಳಲ್ಲಿ ತಪಾಸಣೆಯ ನಂತರ ಸುಳ್ಳೆಂದು ಕಂಡುಬಂದಲ್ಲಿ, ಅಂತಹವರನ್ನು ಸೇವೆಯಿಂದ ಯಾವುದೇ ಕಾರಣ ನೀಡದೆ ತೆಗೆದು ಹಾಕಲಾಗುವುದು ಮತ್ತು ಅವರ ಮೇಲೆ ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸದ್ದಕ್ಕೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಕ್ರಮ ಕೈಗೊಳ್ಳಲಾಗುವುದು.
6. ಈ ನೇಮಕಾತಿ ಆದೇಶವು ನ್ಯಾಯಾಲಯದ ಪ್ರಕರಣಗಳಲ್ಲಿ ಹೂಡಲಾಗುವ / ಹೂಡಲಾಗಿರುವ ತೀರ್ಪಿನನ್ವಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.
7. ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರು ಹೊರಡಿಸಿರುವ ಅಂತಿಮ ಆಯ್ಕೆ ಪಟ್ಟಿಯನ್ನೇ ಸಂಸ್ಥೆಯಲ್ಲಿ ಜೇಷ್ಠತಾ ಪಟ್ಟಿಯನ್ನಾಗಿ ಪರಿಗಣಿಸಲಾಗುವುದು.
8. ಕರ್ನಾಟಕ ಸಿವಿಲ್ ಸೇವಾ (ನೇಮಕಾತಿ) ಕನ್ನಡ ಭಾಷಾ ಪರೀಕ್ಷೆ ನಿಯಮಗಳು 1984 ರ ನಿಯಮಗಳಡಿಯಲ್ಲಿ ವಿನಾಯಿತಿ ಹೊಂದಿರುವವರನ್ನು ಹೊರತುಪಡಿಸಿ ಸದರಿ ನಿಯಮಗಳಲ್ಲಿ ವಿವರಿಸಿರುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಕಡ್ಡಾಯವಾಗಿ ತೇರ್ಗಡೆಯಾಗುವ ಷರತ್ತಿಗೆ ಒಳಪಟ್ಟಿರುತ್ತದೆ.
9. ದೈಹಿಕ ಅರ್ಹತಾ ಪ್ರಮಾಣಪತ್ರವನ್ನು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಪಡೆದು ಸಲ್ಲಿಸುವುದು ಮಹಿಳಾ ಅಭ್ಯರ್ಥಿಯು 12 ವಾರಗಳು ಅಥವಾ ಮೇಲ್ಪಟ್ಟು ಗರ್ಭಿಣಿಯಾಗಿರುವುದು ವೈದ್ಯಕೀಯ ಪ್ರಮಾಣ ಪತ್ರದಲ್ಲಿ ಕಂಡು ಬಂದಲ್ಲಿ ಪ್ರಸವ ಆದ 24 ವಾರಗಳ ನಂತರ ವೈದ್ಯಕೀಯ ಪರೀಕ್ಷೆಗೊಳಪಟ್ಟು ವೈದ್ಯಕೀಯ ಅರ್ಹತಾ ಪ್ರಮಾಣಪತ್ರವನ್ನು ಕರ್ತವ್ಯಕ್ಕೆ ಹಾಜರಾಗುವಾಗ ಸಲ್ಲಿಸುವುದು.
10. ಅಭ್ಯರ್ಥಿಯು ನೇಮಕಾತಿ ಸಂಬಂಧ ಸಲ್ಲಿಸಿರುವ ಯಾವುದೇ ದಾಖಲಾತಿ ನಕಲು ಎಂದು ಕಂಡು ಬಂದಲ್ಲಿ ಸೇವೆಯಿಂದ ವಜಾಗೊಳಿಸಿ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

Government of Karnataka
ಕರ್ನಾಟಕ ಸರ್ಕಾರ
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)
ಹೈದ್ರಾಬಾದ್ ರಸ್ತೆ , ರಾಯಚೂರು Hyderabad Road, Raichur
www.rims-raichur.com info@rims-raichur.com Phone/Fax : 08532 238488/89

11. ಅಭ್ಯರ್ಥಿಗಳು ಈ ಸಂಸ್ಥೆಯಲ್ಲಿ ಕರ್ತವ್ಯಕ್ಕೆ ಹಾಜರಾದ ನಂತರ ಯಾವುದೇ ಸರ್ಕಾರದ ಸ್ವಾಯುತ್ತ ಸಂಸ್ಥೆ ಅಥವಾ ಬೇರೆ ಯಾವುದೇ ಸಂಸ್ಥೆಗೆ ನಿಯೋಜನೆ / ಅನ್ಯಪರ ಸೇವೆ / ವರ್ಗಾವಣೆ ಕೋರಿ ಯಾವುದೇ ಕಾರಣಕ್ಕೂ ಅರ್ಜಿಯನ್ನು ಸಲ್ಲಿಸುವುದಿಲ್ಲ ಎಂಬ ನಿಬಂಧನೆಗೆ ಒಳಪಟ್ಟು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲಾಗುವುದು.
12. ಅಭ್ಯರ್ಥಿಯು ಈ ಕೆಳಕಂಡಂತೆ ಲಿಖಿತ ರೂಪದಲ್ಲಿ ಘೋಷಣೆಗಳನ್ನು ಕರ್ತವ್ಯಕ್ಕೆ ಹಾಜರಾಗುವ ಮುನ್ನ ಸಲ್ಲಿಸತಕ್ಕದ್ದು.
    ಅ) ನಾನು ಮದುವೆಯಾಗಿಲ್ಲ / ನಾನು ಮದುವೆಯಾಗಿದ್ದೇನೆ. ಒಬ್ಬಗಿಂತ ಹೆಚ್ಚು ಜೀವಂತ ಪತಿ/ಪತ್ನಿ ಇರುವುದಿಲ್ಲ.
    ಆ) ಶ್ರೀಮತಿ/ ಶ್ರೀ-------------------ಆದ ನಾನು ಪ್ರಾಮಾಣಿಕವಾಗಿ ಭಾರತ ದೇಶದ ಸಂವಿಧಾನಕ್ಕೆ ಬದ್ಧಳಾ ನಾಹಿರುತ್ತೇನೆ ಮತ್ತು ನನ್ನ ಕರ್ತವ್ಯವನ್ನು ನಿಷ್ಠೆಯಿಂದಲೂ ನಿಸ್ವಾರ್ಥತೆಯಿಂದಲೂ ನಿಷ್ಪಕ್ಷಪಾತವಾಗಿ ನಿರ್ವಹಿಸುತ್ತೇನೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.
    ಇ) ಶ್ರೀಮತಿ/ಶ್ರೀ----------ಆದ ನಾನು ನನ್ನ ನೇಮಕಾತಿಯು ತಾತ್ಕಾಲಿಕವಾಗಿದ್ದು ಮತ್ತು ಯಾವುದೇ ಸೂಚನೆ/ ಕಾರಣಗಳನ್ನು ನೀಡದೇ ಯಾವುದೇ ಸಮಯದಲ್ಲಾದರೂ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.
    ಈ) ಶ್ರೀಮತಿ/ಶ್ರೀ----------ಆದ ನಾನು ನನ್ನ ಮೇಲೆ ಪೋಲಿಸ್ ಠಾಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುವುದಲ್ಲವೆಂದು ಪ್ರಮಾಣಿಕರಿಸುತ್ತೇನೆ ಮತ್ತು ದಾಖಲಾಗಿರುವುದು ಕಂಡುಬಂದಲ್ಲಿ ಕರ್ತವ್ಯದಿಂದ ವಜಾ ಮಾಡಬಹುದೆಂದು ಖಾತರಿ ಪಡಿಸಿಕೊಂಡು ಈ ನೇಮಕಾತಿಯನ್ನು ಒಪ್ಪಿರುತ್ತೇನೆ.

ಮೇಲಿನ ಷರತ್ತುಗಳ ಘೋಷಣಾ ಪತ್ರವನ್ನು ಛಾಪಾ ಕಾಗದದಲ್ಲಿ ಸಂಸ್ಥೆಯ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳು ನೇಮಕವಾಗುವ ಹುದ್ದೆಗೆ ಸೇರಲು ಕೈಗೊಂಡ ಪ್ರಯಾಣಗಳಿಗೆ ಯಾವುದೇ ಪ್ರಯಾಣ ಭತ್ಯ ಪಡೆಯಲು ಅರ್ಹರಾಗಿರುವುದಿಲ್ಲ ಹಾಗೂ ಅವರ ಕರ್ತವ್ಯದ ಹಾಜರಾತಿಯನ್ನು ವೈದ್ಯಕೀಯ ಮಂಡಳಿಯ ವರದಿ ಆದಾರದ ಮೇಲೆ ಅರ್ಹರಿದ್ದರೆ ಚಲನಾದೇಶ ಪಡೆದ ನಂತರ ಸಂಬಂಧಿಸಿದ ಆಸ್ಪತ್ರೆಗೆ ಹಾಜರಾದ ದಿನಾಂಕದಿಂದ ಕರ್ತವ್ಯಕ್ಕೆ ಹಾಜರಾತಿ ಎಂದು ಪರಿಗಣಿಸಲಾಗುವುದು.

ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು.

ಇವರಿಗೆ,
ಸಂಬಂಧಪಟ್ಟ ಅಭ್ಯರ್ಥಿಗಳಿಗೆ

ಪ್ರತಿಗಳು:
1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ. (ವೈದ್ಯಕೀಯ ಶಿಕ್ಷಣ). ವಿಕಾಸ ಸೌಧ. ಬೆಂಗಳೂರು.
2. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗೂರು – ಮಾನ್ಯ ವೈದ್ಯಕೀಯ ಶಿಕ್ಷ ಸಚಿವರ ಅವಗಾಹನೆಗೆ ಸಲ್ಲಿಸಲು.
3. ಸರ್ಕಾರದ ಉಪ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ವಿಕಾಸ ಸೌಧ ಬೆಂಗಳೂರು.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದ ರಾವ್ ವೃತ್ತ, ಬೆಂಗಳೂರು.
5. ನಿರ್ದೇಶಕರು, ಕರ್ನಾಟಕ ಪರಿಕ್ಷ ಪ್ರಾಧಿಕಾರ ಬೆಂಗಳೂರು, ಇವರಿಗೆ ಮಾಹಿತಿಗಾಗಿ.
6. ವೈದ್ಯಕೀಯ ಅಧೀಕ್ಷಕರು, ರಿಮ್ಸ್, ರಾಯಚೂರು
7. ಲೆಕ್ಕಪತ್ರ ವಿಭಾಗ, ರಿಮ್ಸ್, ರಾಯಚೂರು
8. ವೇತನ ವಿಭಾಗ, ರಿಮ್ಸ್, ರಾಯಚೂರು
9. ಕಛೇರಿ ಪ್ರತಿ / ಹೆಚ್ಚಿನ ಪ್ರತಿ.